# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಯಾದಗಿರಿ.

## ಎಸ್.ಸಿ. 64/2020

1. ಯಾದಗಿರಿ ಮಹಿಳಾ ಪೊಲೀಸಠಾಣೆ ....ಫಿರ್ಯಾದಿ

ವಿರುದ್ಧ

1. ಆನಂದ ಮತ್ತು ಇತರರು ....ಆರೋಪಿತರು

## ದೋಷಾರೋಪಣೆ

ನಾನು **ಎ. ಈರಣ್ಣ ಎಮ್.ಕಾಂ. ಎಲ್.ಎಲ್.ಎಮ್** ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಯಾದಗಿರಿ,

ಆರೋಪಿತರಾದ

1. ಆನಂದ ತಂದೆ ಹೀರ್ಯಾ ರಾಠೋಡ, ವಯಸ್ಸುಃ 32 ವರ್ಷ, ಉದ್ಯೋಗಃ ಕೂಲಿಕೆಲಸ ಸಾಃ ಮುದ್ನಾಳ ದೊಡ್ಡ ತಾಂಡಾ ಯಾದಗಿರಿ,
2. ಅರವಿಂದ ತಂದೆ ಹೀರ್ಯಾ ರಾಠೋಡ, ವಯಸ್ಸುಃ 20 ವರ್ಷ, ಉದ್ಯೋಗಃ ಆಟೋಚಾಲಕ ಸಾಃ ಮುದ್ನಾಳ ದೊಡ್ಡ ತಾಂಡಾ ಯಾದಗಿರಿ,
3. ದೇವ್ಯಾ ತಂದೆ ಹೀರ್ಯಾ ರಾಠೋಡ, ವಯಸ್ಸುಃ 35 ವರ್ಷ, ಉದ್ಯೋಗಃ ಕೂಲಿಕೆಲಸ ಸಾಃ ಮುದ್ನಾಳ ದೊಡ್ಡ ತಾಂಡಾ ಯಾದಗಿರಿ,
4. ನೇಹರು ತಂದೆ ಹೀರ್ಯಾ ರಾಠೋಡ, ವಯಸ್ಸುಃ 21 ವರ್ಷ, ಉದ್ಯೋಗಃ ಕೂಲಿಕೆಲಸ ಸಾಃ ಮುದ್ನಾಳ ದೊಡ್ಡ ತಾಂಡಾ ಯಾದಗಿರಿ,

5 ಶಶಿಕಲಾ, ವಯಸ್ಸುಃ 24 ವರ್ಷ, ಉದ್ಯೋಗಃ ಕೂಲಿಕೆಲಸ ಸಾಃ ಮುದ್ನಾಳ ದೊಡ್ಡ ತಾಂಡಾ ಯಾದಗಿರಿ,

6 ಸಪ್ನಾ, ವಯಸ್ಸುಃ 22 ವರ್ಷ, ಉದ್ಯೋಗಃ ಕೂಲಿಕೆಲಸ ಸಾಃ ಮುದ್ನಾಳ ದೊಡ್ಡ ತಾಂಡಾ ಯಾದಗಿರಿ,

7 ಸುರೇಖಾ, ವಯಸ್ಸುಃ 20 ವರ್ಷ, ಉದ್ಯೋಗಃ ಕೂಲಿಕೆಲಸ ಸಾಃ ಮುದ್ನಾಳ ದೊಡ್ಡ ತಾಂಡಾ ಯಾದಗಿರಿ,

8 ಲಚ್ಚಿಬಾಯಿ, ವಯಸ್ಸುಃ 35 ವರ್ಷ, ಉದ್ಯೋಗಃ ಕೂಲಿಕೆಲಸ ಸಾಃ ಮುದ್ನಾಳ ದೊಡ್ಡ ತಾಂಡಾ ಯಾದಗಿರಿ,

9 ನಾಗರಾಜ, ವಯಸ್ಸುಃ 32 ವರ್ಷ, ಉದ್ಯೋಗಃ ಕೂಲಿಕೆಲಸ ಸಾಃ ಮುದ್ನಾಳ ದೊಡ್ಡ ತಾಂಡಾ ಯಾದಗಿರಿ,

10 ಶಾಂತಿಬಾಯಿ, ವಯಸ್ಸುಃ 32 ವರ್ಷ, ಉದ್ಯೋಗಃ ಕೂಲಿಕೆಲಸ ಸಾಃ ಮುದ್ನಾಳ ದೊಡ್ಡ ತಾಂಡಾ ಯಾದಗಿರಿ,

ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತೇನೆ.

ದಿಃ 11.02.2020 ರಂದು ಸಂಜೆ 05.30 ರ ಸುಮಾರು ಯಾದಗಿರಿಯ ಸುಭಾಶ ಚೌಕ ಹತ್ತಿರ ಇರುವ ದುರ್ಗಾ ಕಂಪ್ಯೂಟರ್ಸಗೆ ಚಾಸಾ-1 ಮತ್ತು 2 ರವರು ತಮ್ಮ ತಾಂಡಾದಲ್ಲಿ ಒಂದು ಹೊಸ ಶಾಲೆ ತೆರೆಯುವ ಉದ್ದೇಶದಿಂದ ಆನಲೈನ್ ಮೂಲಕ ಅರ್ಜಿ ಹಾಕಲು ಬಂದಿದ್ದು, ಆರೋಪಿತರಾದ ನೀವು ಹಳೆ ವೈಷಮ್ಯದಿಂದ ಚಾಸಾ-1 ಮತ್ತು 2 ರವರನ್ನು ಕೊಲೆ ಮಾಡುವ ಉದ್ದೇಶದಿಂದ, ಅಕ್ರಮಕೂಟ ರಚಿಸಿಕೊಂಡು ಸೇರಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 143 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

2. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ದೊಂಬಿ ಮಾಡುವ ಉದ್ದೇಶದಿಂದ ಕೈಯಿಂದ ಮತ್ತು ಕೈಯಲ್ಲಿ ಬಡಿಗೆಳನ್ನು ಹಿಡಿದುಕೊಂಡು ಸೇರಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 147 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

3. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಕೈಯಿಂದ ಮತ್ತು  ಬಡಿಗೆಗಳನ್ನು ಹಿಡಿದುಕೊಂಡು ಹಲ್ಲೆ ಮಾಡುವ ಉದ್ದೇಶದಿಂದ ಸೇರಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 148 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

4. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ  ಆರೋಪಿತರಾದ ನೀವುಗಳು ಹಲ್ಲೆ ಮಾಡುವ ಉದ್ದೇಶದಿಂದ ಹಳೇ ವೈಷಮ್ಯದಿಂದಾಗಿ ಜಗಳ ತೆಗೆದು ರಂಡೇರು ಚೋಲೋ ಸಿಕ್ಕಾರಾ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ನೀವು ಭಾರತೀಯ ದಂಡ

ಸಂಹಿತೆ ಕಲಂ. 504 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

5. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಚಾಸಾ-1 ಮತ್ತು 2 ರವರಿಗೆ ಈ ಸೂಳೇಯರಿಗೆ ಬಿಡಬ್ಯಾಡ್ರಿ ಖಲಾಸ್ ಮಾಡ್ರಿ ಎಂದು ಜೀವದ ಬೆದರಿಕೆ ಹಾಕಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 506 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

6. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 4 ನೇ ಆರೋಪಿ ಕೈಯಿಂದ ಚಾಸಾ-1 ರವರ ಹೊಟ್ಟೆಗೆ, ಬೆನ್ನಿಗೆ ಗುದ್ದಿ ಒಳಪೆಟ್ಟು ಮಾಡಿದ್ದು, 5 ನೇ ಆರೋಪಿ ಚಾಸಾ-1 ರವರ ತಲೆಮೇಲೆ ಕೂದಲು ಹಿಡಿದು ಜಗ್ಗಾಡಿದ್ದು, 6 ನೇ ಆರೋಪಿ ಚಾಸಾ-1 ರವರಿಗೆ ಕೈಯಿಂದ ಹೊಡೆದಿದ್ದು, ಆರೋಪಿ-7 ಮತ್ತು 8 ರವರು ಕೈಗಳಿಂದ ಚಾಸಾ-1 ಮತ್ತು 2 ರವರಿಗೆ ಹೊಡೆದಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 323 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

7. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಚಾಸಾ-1 ರವರಿಗೆ 2 ನೇ ಆರೋಪಿ ಬಡಿಗೆಯಿಂದ ಸೊಂಟಕ್ಕೆ, ಎರಡು ಕೈಗಳಿಗೆ ಜೋರಾಗಿ ಹೊಡೆದು, 3 ನೇ ಆರೋಪಿ ಮತ್ತೊಂದು ಬಡಿಗೆಯಿಂದ ಚಾಸಾ-1 ರವರ ಮೈಮೇಲೆ ಹೊಡೆದಿದ್ದು, ಭಾರಿ ಗುಪ್ತಗಾಯ ಮಾಡಿ ಸಾದಾ ಸ್ವರೂಪ ಗಾಯ ಮಾಡಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 324 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

8. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ನೇ ಆರೋಪಿ ಚಾಸಾ-1 ರವರ ಕೈಹಿಡಿದು ಎಳೆದಾಡಿ ಮಾನಭಂಗ ಉಂಟು ಮಾಡಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 354 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

9. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಚಾಸಾ-1 ಇವರು ಬಾಡಿಗೆಗೆ ತಂದಿರುವ ಕಾರು ಸಂಖ್ಯೆ ಕೆಎ-51-ಎಮ್ ಎಫ್-9881 ರ ಗ್ಲಾಸ ಮತ್ತು ಬಾನೇಟವನ್ನು ಬಡಿಗೆಯಿಂದ ಹೊಡೆದು ಕಾರು ಜಕ್ಕಂಗೋಳಿಸಿ ಒಟ್ಟು ಸುಮಾರು ರೂ. 65,000/- ರಷ್ಟು ನಷ್ಟ ಉಂಟು ಮಾಡಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 427 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

10. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 2 ನೇ ಆರೋಪಿ ಬಡಿಗೆಯಿಂದ ಚಾಸಾ-1 ರವರ ಸೊಂಟಕ್ಕೆ, ಎರಡು ಕೈಗಳಿಗೆ ಜೋರಾಗಿ ಹೊಡೆದು ಭಾರಿ ಗುಪ್ತಗಾಯ ಮಾಡಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 326 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

11 ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ನೇ ಆರೋಪಿಯಾದ ನೀನು ಚಾಸಾ-2 ರವರನ್ನು ಕೊಲೆ ಮಾಡುವ ಉದ್ದೇಶದಿಂದ, ಬಡಿಗೆಯಿಂದ ಚಾಸಾ-2 ರವರಿಗೆ ತಲೆಯ ಮೇಲೆ ಜೋರಾಗಿ ಹೊಡೆದು ಮಾರಾಂಣತಿಕ ಹಲ್ಲೆ ಉಂಟು ಮಾಡಿ, ಭಾರಿ ತೀವ್ರ ಸ್ವರೂಪದ ಗಾಯಮಾಡಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 307 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

ಈ ಮೇಲೆ ಹೇಳಿರುವ ಆಪಾದನೆಗಳಿಗೆ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ಇಂದು ದಿನಾಂಕಃ **20.12.2025** ರಂದು ಆದೇಶಿಸಿದ್ದೇನೆ.

ಸ್ಥಳಃ- ಯಾದಗಿರಿ

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಯಾದಗಿರಿ.